ಓಂ
ಬಿಡಿ ಪತ್ರಿಕೆ ರೂ. 5/-
ಗ್ರಾಮವಾಸಿ
ವನವಾಸಿ
ನಗರವಾಸಿ
ನಾವೆಲ್ಲ ಭಾರತವಾಸಿ

# ವನಜ್ಯೋತಿ

ವನವಾಸಿ ಕಲ್ಯಾಣದ ಮಾಸಿಕ ವಾರ್ತಾಸಂಚಿಕೆ
Vanajyothi Monthly Newsletter
October -2018 • Volume-1 • Issue - 13
ಅಕ್ಟೋಬರ್-2018 • ಸಂಪುಟ-1 • ಸಂಚಿಕೆ-13

## ಶಿರಡಿಯಲ್ಲಿ ಅಭೂತಪೂರ್ವ ವನವಾಸಿ ಸಮ್ಮೇಳನ




ಅಖಿಲ ಭಾರತೀಯ ವನವಾಸಿ ಕಲ್ಯಾಣಾಶ್ರಮದ ಆಶ್ರಯದಲ್ಲಿ ಮಹಾರಾಷ್ಟ್ರದ ಶಿರಡಿಯಲ್ಲಿ ಮೂರು ದಿನಗಳ ವನವಾಸಿ ಕಾರ್ಯಕರ್ತರ ರಾಷ್ಟ್ರೀಯ ಸಮ್ಮೇಳನ ಸೆಪ್ಟೆಂಬರ್ 30, ಅಕ್ಟೋಬರ್ 1 ಮತ್ತು 2, 2018 ರಂದು ಅತ್ಯಂತ ವಿಜೃಂಭಣೆಯಿಂದ ಹಾಗೂ ಯಶಸ್ವಿಯಾಗಿ ನಡೆಯಿತು. ಒಂದು ರೀತಿಯಲ್ಲಿ ಅದು ಮಿನಿ ಭಾರತ ಒಂದೆಡೆ ನೆರೆದಂತ ಸಮಾವೇಶವಾಗಿತ್ತು. ಈ ಸಮಾವೇಶದಲ್ಲಿ ಇಡೀ ದೇಶದ ಮೂಲೆ ಮೂಲೆಗಳಿಂದ ಬಂದಿದ್ದ 2510 ಕಾರ್ಯಕರ್ತರು ಭಾಗಹಿಸಿದ್ದರು. ಈ ಪೈಕಿ 1839 ಪುರುಷರು ಹಾಗೂ 671 ಮಹಿಳೆಯರು ಭಾಗವಹಿಸಿದ್ದು, ಇದು ಈವರೆಪಿಗೆ ನಡೆದಿದ್ದ ವನವಾಸಿ ಕಲ್ಯಾಣಾಶ್ರಮದ ಕಾರ್ಯಕರ್ತರ ಬೃಹತ್ ಸಮಾವೇಶ ಎನಿಸಿತು. ಸಮಾವೇಶದಲ್ಲಿ ಕೇರಳದಿಂದ ಹಿಮಾಚಲದವರೆಗೆ, ಗುಜರಾತ್‌ನಿಂದ ಅರುಣಾಚಲ ಪ್ರದೇಶದವರೆಗೆ ಹಾಗೂ ಅಂಡಮಾನ್ ನಿಕೋಬಾರ್ ಮತ್ತು ನೇಪಾಳದಿಂದಲೂ ಪ್ರತಿನಿಧಿಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

ಸಮ್ಮೇಳನದ ಉದ್ಘಾಟನಾ ಸಮಾರಂಭ ದಿನಾಂಕ 30.9.2018 ರಂದು ಬೆಳಿಗ್ಗೆ ನಡೆಯಿತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿ ಶ್ರೀ ದೇವೇಂದ್ರ ಫಡ್ನವೀಸ್ ಭಾಗವಹಿಸಿದ್ದರು. ಈ ಸಮಾರಂಭದಲ್ಲಿ ಪೂಜ್ಯ ಸಂತ ಶ್ರೀ ರಾಮಗಿರಿ ಮಹಾರಾಜ್, ಮೇಘಾಲಯದ ಮಾಜಿ ರಾಜ್ಯಪಾಲ ರಣಜಿತ್ ಶೇಖರ್ ಮುಶಾರಿ, ವನವಾಸಿ ಕಲ್ಯಾಣದ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜಗದೇವ್‌ರಾಮ್ ಉರಾವ್ ಅತಿಥಿಗಳಾಗಿ ಭಾಗವಹಿಸಿದ್ದರು. ಇವರಲ್ಲದೆ ಕೇರಳದ ಜನಜಾತಿಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಲಕ್ಷ್ಮಿ ಕುಟ್ಟಿ ಅಮ್ಮ, ರಾಜಾ ಶ್ರೀಮಾನ್ ಕಮಲ್ ಚಂದ್ ಭಂಜದೇವ್, ತೆಲಂಗಾಣದ ದಾಸರಿ ಶ್ರೀನಿವಾಸುಲು, ನಾಗಪುರದ ರಾಜೇಂದ್ರ ಓರಾನ್, ಸುರೇಶ್ ಒರಾನ್, ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಸುರೇಶ್ ಪೋತೇಜಿ, ಶಿರಡಿ ಸಾಯಿ ಸಂಸ್ಥಾನ್ ಟ್ರಸ್ಟ್ ಅಧ್ಯಕ್ಷ ಶ್ರೀ ಸುರೇಶ್ ಹಾವರೇ ಉಪಸ್ಥಿತರಿದ್ದರು. ಈ ಪೈಕಿ ಶ್ರೀ ದೇವೇಂದ್ರ ಫಡ್ನವೀಸ್ ರವರನ್ನು ಹೊರತು ಪಡಿಸಿದರೆ ಇತರೆ ಎಲ್ಲ ಗಣ್ಯರೂ ಮೂರೂ ದಿನಗಳು ಸಮ್ಮೇಳನದಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು. ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಬಹುತೇಕ ಜನಜಾತಿಯ

...3ನೇ ಪುಟಕ್ಕೆ

Scanned by CamScanner

## ಗೀತೆ

ಭೋಗ ಮೆಟ್ಟಿ ತ್ಯಾಗ ಮೆರೆದ ಕರ್ಮಭೂಮಿ ಭಾರತ
ಮನುಜರಾಗಿ ಹುಟ್ಟಲಿಲ್ಲಿ ಜನುಮಜನುಮ ಸುಕೃತ ॥ಪ॥

ನಾಲ್ಕುದಿನದ ಬಾಳು ನಮದು ಆಶಲಿಂದು ಸಾರ್ಥಕ
ತ್ಯಾಗ ಮೆರೆದು ಅಮರರಾದ ಸಂತರೆಮಗೆ ಪ್ರೇರಕ
ಮಣ್ಣ ಋಣವ ಕಳೆವುದಕ್ಕೆ ಸೇವೆಯೊಂದೇ ಸಾಧಕ
ನಗುತ ನಲಿವ ಸಮಾಜಕ್ಕೆ ಸಾಗಬೇಕು ಕಾಯಕ ॥1॥

ಧ್ಯೇಯ ಪಥವ ಬಿಟ್ಟು ಬಾಳ್ವೆ ಬೇಡ ನಮಗೆ ನೀರಸ
ಪರರಿಗಾಗಿ ಸತತ ಮಿಡಿವ ಹೃದಯದಿಂದ ಸಂತಸ
ಕಳೆದು ಬಿಡುವ ರೋಷ ದ್ವೇಷ ಎಲ್ಲ ಮನದ ಕಲ್ಮಷ
ವಿರಸ ಸರಿಸಿ ಹರಿಸಿ ಬಿಡುವ ಶುದ್ಧ ಸ್ನೇಹ ಮಾನಸ ॥2॥

ಸ್ವಾರ್ಥ ಲಾಭ ಸ್ತುತಿಯ ಮೋಹ ಬೇರು ಸಹಿತ ಕೀಳುವ
ತರುವಿನಂತೆ ನೆರಳು ನೀಡಿ ಬದುಕ ಧನ್ಯಗೊಳಿಸುವ
ತಮವು ನಮಗೆ ಬೆಳಕು ಜಗಕೆ ದೀಪದಂತೆ ಉರಿಯುವ
ಅಳುವನಳಿಸಿ ಪ್ರೀತಿ ಬೆಳೆಸಿ ನಾಡಿನೇಳ್ಗೆ ಕಾಣುವ ॥3॥

## ವಾಚಕ ಬಂಧುಗಳಲ್ಲಿ ಕಳಕಳಿಯ ವಿನಂತಿ

ಇದುವರೆಗೆ ನಮ್ಮ "ವನಜ್ಯೋತಿ" ಪತ್ರಿಕೆಯನ್ನು ಪ್ರಾಯೋಗಿಕವಾಗಿ ಉಚಿತವಾಗಿ ಕಳಿಸುತ್ತಿದ್ದೆವು. ಆದರೆ ಇತ್ತೀಚೆಗೆ ಪತ್ರಿಕೆಯನ್ನು ಉಚಿತವಾಗಿ ಕಳಿಸುವುದು ಆರ್ಥಿಕವಾಗಿ ಕಷ್ಟವಾಗುತ್ತಿದೆ. ಆದ್ದರಿಂದ ಮುಂದಿನ ಸಂಚಿಕೆಯಿಂದ ಪತ್ರಿಕೆಗೆ ಕೆಳಕಂಡಂತೆ ದರವನ್ನು ನಿಗದಿಪಡಿಸಲಾಗಿದೆ.

**ಬಿಡಿ ಪತ್ರಿಕೆ 5.00 ವಾರ್ಷಿಕ ವಂತಿಕೆ 50.00 ದ್ವೈವಾರ್ಷಿಕ ವಂತಿಕೆ 100.00**

ಎಲ್ಲಾ ನಮ್ಮ ಹಿತೈಷಿಗಳೂ ಸಹೃದಯ ಓದುಗರು ದಯವಿಟ್ಟು ವಾರ್ಷಿಕ/ದ್ವೈವಾರ್ಷಿಕ ವಂತಿಗೆಯನ್ನು ಈ ಕೆಳಕಂಡ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಾಗಿ ವಿನಂತಿ ಹಾಗೂ ತಮ್ಮಲ್ಲಿಗೆ ಬರುವ ನಮ್ಮ ಕಾರ್ಯಕರ್ತರಿಗೆ ಹಣವನ್ನು ನೀಡಿ ರಶೀತಿಯನ್ನು ಪಡೆಯಬಹುದಾಗಿದೆ.

ಬ್ಯಾಂಕ್ : ವಿಜಯಬ್ಯಾಂಕ್

ಶಾಖೆ : ಜೆ.ಎಲ್.ಬಿ ರಸ್ತೆ, ಮೈಸೂರು

IFSC Code : VIJB0001099

SB A/C No. (109901010016877)

### ದಯವಿಟ್ಟು ಗಮನಿಸಿ

ಈವರಗೆ ನಮ್ಮ 'ವನವಾಸಿ ಕಲ್ಯಾಣ' ಉಳಿತಾಯ ಖಾತೆ ಸಂಖ್ಯೆ: 04212160000078 ಸಿಂಡಿಕೇಟ್ ಬ್ಯಾಂಕ್, ಬೆಂಗಳೂರಿನ ಚಾಮರಾಜಪೇಟೆ ಶಾಖೆಯಲ್ಲಿದ್ದು, ಈಗ ಅದೇ ಖಾತೆಯನ್ನು ಮೈಸೂರಿನ ಸಿಂಡಿಕೇಟ್ ಬ್ಯಾಂಕ್, ಕುವೆಂಪುನಗರ ಶಾಖೆಗೆ ವರ್ಗಾಯಿಸಲಾಗಿದೆ.

ಈ ಶಾಖೆಯ IFSC Code No.: SYNB0001717 ಆಗಿರುತ್ತದೆ.

ತೆರೆದ ಅಂಚೆ

ಶ್ರೀಮತಿ/ಶ್ರೀ

Printed by Sujatha V Bhat and Published and Owned by Sripad and Printed at Ramyacreations,2nd Floor, Madvesha Complex, Nazarbad Main Road, Mysore 570 010 and Published at EWS 28, 2nd Cross Ist Stage, Kuvempunagar, Mysore- 570023, Editor Dr. V. Ranganath

ತಲುಪಿಸಲು ಆಗದಿದ್ದಲ್ಲಿ ದಯವಿಟ್ಟು ಮೇಲೆ ತಿಳಿಸಿರುವ ಪ್ರಕಾಶಕರ ವಿಳಾಸಕ್ಕೆ ಹಿಂದಿರುಗಿಸಿ

ಇಮೇಲ್: info@vanavasikalyana.org ವೆಬ್ ಸೈಟ್: www.vanavasikalyana.org

Scanned by CamScanner